ಕುಂದಾಪುರ ಕ್ಷೇತ್ರದ ಬಳ್ಕೂರು ಗ್ರಾಮದಲ್ಲಿ ಹರಿಯುವ ವರಾಹಿ ನದಿ ಕೊರತೆ ತಡೆಗೋಡೆ ರಚನೆ,

೭೫೬. ಶ್ರೀ ಪ್ರತಾಪ ಚಂದ್ರ ಶೆಟ್ಟಿ(ಕುಂದಾಪುರ). — ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕು ಬಳ್ಕೂರು ಗ್ರಾಮದ ಹತ್ತಿರ ಹರಿಯುವ ವರಾಹಿ ನದಿ ಕೊರೆತದ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ತಡೆಗೋಡೆ ನಿರ್ಮಿಸುವ ಯೋಜನೆ ಸರ್ಕಾರದವರ ಮುಂದಿದೆಯೇ?

ಇ) ಹಾಗಿದ್ದಲ್ಲಿ, ಅದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಹೆಚ್.ಡಿ. ದೇವೇಗೌಡ. (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ಹೌದು

ಆ) ಹೌದು. ಈ ಯೋಜನೆಗೆ ಮಂಜೂರಾತಿ ನೀಡಲಾಗಿದೆ.

ಇ) ೨ ಲಕ್ಷ ರೂ.ಗಳು.

ದಾಂಡೇಲಿಯ ಇಂಡಿಯನ್ ಪ್ಲೈವುಡ್ ಮ್ಯಾನು ಫ್ಯಾಕ್ಚರಿಂಗ್ ಕಂಪನಿ

೧೭೪೧ **ಶ್ರೀ ಆರ್. ಎನ್.ನಾಯ್ಕ**(ಭಟ್ಕಳ)—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾಂಡೇಲಿಯ ಇಂಡಿಯನ್ ಪ್ಲೈವುಡ್ ಮ್ಯಾನುಫಾಕ್ಚರಿಂಗ್ ಕಂಪನಿಯವರಿಗೆ ಅರಣ್ಯ ಖಾತೆಯಿಂದ ಕಟ್ಟಿಗೆ ಪೂರೈಸಲಾಗಿತ್ತಿದೆಯೇ ಹಾಗಿದ್ದಲ್ಲಿ ಪ್ರತಿ ವರ್ಷಕ್ಕೆ ಪೂರೈಸುವ ಕಟ್ಟಿಗೆ ಪ್ರಮಾಣವೆಷ್ಟು?

ಆ) ಯಾವ ಆಧಾರದ ಮೇಲೆ ಕಟ್ಟಿಗೆ ಪೂರೈಸಲಾಗುತ್ತಿದೆ?

ಇ) ಪ್ರತಿ ವರ್ಷಕ್ಕೆ ಎಷ್ಟು ಉತ್ಪಾದನೆ ಆ ಕಂಪನಿಗೆ ಇದೆ ಎನ್ನುವ ಬಗ್ಗೆ ಸರಕಾರದವರಲ್ಲಿ ಮಾಹಿತಿ ಇದೆಯೇ?

ಈ) ಸದರೀ ಕಾರ್ಖಾನೆಗೆ ದಾಂಡೇಲಿ ಸುತ್ತ ಮುತ್ತಲಿನ ಅರಣ್ಯಗಳಿಂದ ಕಟ್ಟಿಗೆ ಕಳ್ಳ ಸಾಗಾಣಿಕೆ ಆಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಬಿ.ಎ. ಜೀವಿಜಯ (ಅರಣ್ಯ ಮಂತ್ರಿಗಳು).—

ಅ) ಮೆ. ಇಂಡಿಯನ್ ಪ್ಲೈವುಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿಯವರಿಗೆ ತಮ್ಮ ಐದು ಕಾರ್ಖಾನೆಗಳಲ್ಲಿ ಉಪಯೋಗಿಸಲು ಈ ಕೆಳಗೆ ಕಾಣಿಸಿದ ಪ್ರಮಾಣದ ಕಟ್ಟಿಗೆ(ಪ್ಲೈವುಡ್ ತಯಾರಿಕೆಗಾಗಿ) ಮತ್ತು ಸೌದೆ; ಲಾಪ್ಸ್ ಅಂಡ್ ಟಾಪ್ಸ್ (ಚಿಪ್ ಬೋರ್ಡ್ ತಯಾರಿಕೆಗಾಗಿ) ಪೂರೈಸಲು ಒಪ್ಪಂದ ಮಾಡಿಕೊಳ್ಳಲಾಗಿದೆ.

ಜಾತಿ	ಪೂರೈಸಲು ಒಪ್ಪಿಕೊಂಡಿರುವ ಮರದ ಪ್ರಮಾಣ ಪ್ರತಿ ವರ್ಷಕ್ಕೆ	ಯಾವ ಅರಣ್ಯ ವೃತ್ತದಿಂದ ಪೂರೈಸಲು ಒಪ್ಪಿಕೊಂಡಿರುವುದು.
೧) ಮರ	೨೨,೮೩೨ ಘ.ಮೀ. ೮,೩೭೬ ಘ.ಮೀ.	ಉತ್ತರ ಕನ್ನಡ ವೃತ್ತ. ಶಿವಮೊಗ್ಗ ಮತ್ತು ಮಡಿಕೇರಿ ವೃತ್ತಗಳಿಂದ.
೨) ಲಾಪ್ಸ್ ಅಂಡ್ ಟಾಪ್ಸ್ (ಸೌದೆ)	೧೫,೦೦೦ ಮೆ. ಟನ್.	ಉತ್ತರ ಕನ್ನಡ ವೃತ್ತ.

ಅ) ಕಾರ್ಖಾನೆಯ ಸ್ಥಾಪಿತ ಸಾಮರ್ಥ್ಯವನ್ನು ಪರಿಗಣಿಸಿ, ಪೂರೈಸುವ ಮರದ ಪ್ರಮಾಣವನ್ನು ನಿಗದಿ ಮಾಡಲಾಗುವುದು. ಆದರೆ ವಾಸ್ತವಿಕವಾಗಿ ಕಾರ್ಖಾನೆಗೆ ಮೀಸಲಿಟ್ಟ ಪ್ರದೇಶದಲ್ಲಿ ಲಭ್ಯವಿರುವ ಮರದ ಆಧಾರದ ಮೇಲೆ ಮರವನ್ನು ಪೂರೈಸಲಾಗುತ್ತಿದೆ.

ಇ) ಮೆ. ಇಂಡಿಯನ್ ಪ್ಲೈವುಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿಯವರ ವಿವಿಧ ಕಾರ್ಖಾನೆಗಳ ಸ್ಥಾಪಿತ ಸಾಮರ್ಥ್ಯ ಮತ್ತು ಉತ್ಪಾದಿತ ಸಾಮರ್ಥ್ಯ ಈ ಕೆಳಗಿನಂತಿವೆ.

ಕಾರ್ಖಾನೆ	ಸ್ಥಾಪಿತ ಸಾಮರ್ಥ್ಯ	ಉತ್ಪಾದನಾ ಸಾಮರ್ಥ್ಯ
	ಘ. ಮೀ. ನಲ್ಲಿ	ದಶಲಕ್ಷ ಚದುರ ಮೀಟರಿನಲ್ಲಿ
೧) ದಾಂಡೇಲಿ	೨೧,೨೫೦ (ಮರ)	೦.೬ (ಪ್ಲೈವುಡ್)
	೪೨,೦೦೦ (ಸೌದೆ)	೦.೬ (ಚಿಪ್ ಬೋರ್ಡ್)
೨) ತಾಳಗುಪ್ಪ	೧೪,೦೦೦ (ಮರ)	೧.೬ (ಪ್ಲೈವುಡ್)
೩) ಸುಬ್ರಮಣ್ಯ	೧೩,೦೦೦ (ಮರ)	೧.೬ (ಪ್ಲೈವುಡ್)
೪) ಹಂಗಾರಕಟ್ಟ	೧೦,೦೦೦ (ಮರ)	೧.೦ (ಪ್ಲೈವುಡ್)
೫) ಧಾರವಾಡ	೨೫,೦೦೦ (ಮರ)	೨.೫ (ಪ್ಲೈವುಡ್)

ಈ) ಇಲ್ಲ.

ಉತ್ತರ ಕನ್ನಡ ಜಿಲ್ಲೆಯ ಸಾಗುವಳಿ ಹಾಗೂ ಮನೆ ನಿವೇಶನದ ಬಗ್ಗೆ.

*೬೫೮. ಶ್ರೀ ಆರ್. ಎನ್. (ಭಟ್ಕಳ).—ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯ ಸಾಗುವಳಿ ಹಾಗೂ ಮನೆ ನಿವೇಶನದ ಬಗ್ಗೆ ಎಷ್ಟು ಜನರು ಎಷ್ಟು ಎಕರೆ ಕ್ಷೇತ್ರ ಅರಣ್ಯ ಭೂಮಿ ಅತಿಕ್ರಮಿಸಿದ್ದಾರೆ?

ಆ) ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು?

ಇ) ಅತಿಕ್ರಮಣ ಸಾಗುವಳಿಯನ್ನು ವಂಜೂರು ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು? ಅತಿಕ್ರಮಣವನ್ನೆಲ್ಲಾ ಯಾವಾಗ ಸಕ್ರಮಗೊಳಿಸಲಾಗುವುದು?